ನಮ್ಮ ಅನ್ನವನ್ನಷ್ಟೇ ತಿನ್ನುತ್ತಿದ್ದೇವೆ' ಎನ್ನುವ ಮೂಲಕ ಕವಿ ಅಸರ್ಟ್ ಮಾಡಿಕೊಳ್ಳುವ ಬಗೆ ತುಂಬಾ ಮುಖ್ಯವಾದುದು. ಈ ಕಾಲದ ವೈಷಮ್ಯಕ್ಕೆ ಮೂಲವಾಗಿರುವ ಧರ್ಮ, ಪಿತೃಪ್ರಾಧಾನ್ಯ, ವರ್ಗ, ಜಾತಿಗಳ ಹೆಣಿಗೆಯ ಅರಿವು ಕವಿಗಿದೆ. ಈ ಅರಿವಿನಿಂದಲೇ 'ಜಾತಿಗಳ ಜಂಜಾಟದಲ್ಲಿ ಸಂಕರದ ಸೌದೆಯು ಒಲೆ ಉರಿಸುವಾಗ' ಅಂತಹ ಸಾಲುಗಳ ಹುಟ್ಟಿವೆ. ಕನಸುಗಳು ಬಿಕರಿಗಿವೆ... ಆದರೆ, ಹರಾಜಾದ ಕನಸನ್ನು 'ಕೊಳ್ಳುವವರ ಬೊಗಸೆ ತುಂಬಾ ನಿದ್ರಾಹೀನತೆಯ ಮಾತ್ರೆ' ಎನ್ನುವ ಸಾಲು ಏಕಕಾಲದಲ್ಲಿ ಬದುಕಿನ ನಿರರ್ಥಕತೆ, ಆರ್ಥಹೀನತೆಯನ್ನು ಕಟ್ಟಿಕೊಡುತ್ತಾ ವಿಷಾದಕ್ಕೆ ತಳ್ಳಿದರೆ ಇಂದಿನ ಬಂಡವಾಳಶಾಹಿಯ ಕಟುವಿಮರ್ಶೆಯೂ ಆಗುತ್ತದೆ. 'ಹುಲಿಯನ್ನು ಕೊಲ್ಲಲು ದನದ ಕತೆ ಹೇಳಿದವರಲ್ಲವೇ ನೀವು?' ಎನ್ನುವ ಸಾಲು ಕೋಮು ರಾಜಕಾರಣವನ್ನು ಸಮರ್ಥವಾಗಿ ಎದುರಾಗುತ್ತದೆ.

ಈ ಸಂಕಲನದ ಕೆಲವು ಸಾಲುಗಳು ಶಾಯರಿಗಳಂತೆ ಓದುವುದಕ್ಕಿಂತ ಕೇಳಿದಾಗ ವಿಶೇಷ ಅನುಭವ ಉಂಟುಮಾಡುವ ಬಗೆಯಲ್ಲಿವೆ. ಜೊತೆಗೆ, ಭಾಷೆಯ ಮೂಲಕ ಕಣ್ಣಮುಂದೆ ಚಿತ್ರ ಕಟ್ಟಿಕೊಡುವ ಹಾಯ್ಕುಗಳ ಬಗೆಯಲ್ಲಿ ಇಲ್ಲಿನ ಅನೇಕ ಅಭಿವ್ಯಕ್ತಿಗಳಿವೆ. 'ಬಿಳಿ ಮುಗಿಲ ಮೈತುಂಬ ಸುಟ್ಟ ಗಾಯದ ರೊಟ್ಟಿ', 'ಬೀದಿ ದೀಪದಡಿ ಬಿಕ್ಕುತ್ತಲೇ ಇದೆ ಕತ್ತಲು', 'ಹಸಿವು ತಾಳದೆ ಅಳುವ ನಾಯಿಯಂತೆ' ಇಂತಹ ಸಾಲುಗಳು ಉಂಟು ಮಾಡುವ ಅನುಭವ ಭಾಷಿಕ ಮಿತಿಯ ಆಚೆಗಿನದ್ದು.

ಆದರೆ, ಕೆಲವೊಮ್ಮೆ ಹೊಸ ಅಭಿವ್ಯಕ್ತಿಯ ಹುಡುಕಾಟ ಹೊಸ ಪ್ರಯೋಗ ಎನ್ನುವುದರಾಚೆಗೆ ಒಳಗನ್ನು ತಟ್ಟುವ, ಕಾಡುವ ಗುಣವಿಲ್ಲದೇ ಹೋದಾಗ ಪ್ರಜ್ಞಾಪೂರ್ವಕ ಕಟ್ಟೋಣವಾಗುತ್ತದೆ. ಕವಿತೆ ಎನ್ನುವುದು 'ಕಟ್ಟುವಿಕೆಯೇ' ಆದರೂ ಅದನ್ನು ಬೆಸೆಯುವ ಜೀವಸೆಲೆ ಇರಬೇಕಾಗುತ್ತದೆ. 'ಮರ್ಯಾದೆಗೇಡು ಹತ್ಯೆಗಳ ಚರಿತ್ರೆಯ ರಕ್ತದ ಪ್ರವಾಹಕ್ಕೆ ಅಣೆಕಟ್ಟು ಕಟ್ಟಬೇಕಿದೆ', 'ನೀ ತಿಂದು ಬಿಸಾಕಿದ ಸೇಬಿನ ಜೇಬಿನಲ್ಲಿ ಕವಿತೆಯ ಚೂರೊಂದು ಸಿಕ್ಕಿದೆ' ಮುಂತಾದ ಸಾಲುಗಳು ಪ್ರತ್ಯೇಕವಾಗಿ ಬಹುದೊಡ್ಡ ಅರ್ಥ ಹೊಮ್ಮಿಸಲು ಹವಣಿಸಿದರೂ ಓದುವಾಗ ಮಧ್ಯದಲ್ಲೇ ಮುಗ್ಗರಿಸುವಂತೆ ಮಾಡುತ್ತವೆ.

ಕವಿ ಗುರುತಿಸುವಂತೆ ಇಲ್ಲಿ 'ಹಳೆ ರೋಗ' ಇದೆ; 'ಹೊಸ ಮದ್ದು' ಇಲ್ಲ. ಜೊತೆಗೇ ಮರೆಯಲಾಗದ ಹಳೆಯ ಗಾಯಗಳೂ ಇವೆ. ಇವುಗಳಿಂದ ಹೊರಬರುವ ದಾರಿಯಲ್ಲಿ 'ತಿರುವುಗಳು ತಿರುಗುತ್ತಲೇ ಇವೆ ವೃತ್ತದ ಪರಿಧಿಯ ಸುತ್ತ, ನಿಲ್ಲುವ ನಿಲ್ದಾಣ ಮಾತ್ರ ಕಾಣುತ್ತಿಲ್ಲ' ಎಂಬ ದಿಕ್ಕುಗೆಟ್ಟ ಸ್ಥಿತಿ ಇದೆ. ಈ ಕಂಗೆಟ್ಟ ಸ್ಥಿತಿಯಲ್ಲಿ ಕವಿಯೂ ನಿರುಪಾಯನಾಗಿದ್ದಾನೆ. 'ಅಕ್ಷರಗಳೆಲ್ಲ ಹಂಗಿನರಮನೆಯಲ್ಲಿ ಜೀತಕ್ಕಳಿದಿವೆ, ವಿಮೋಚನೆಗೆ ಎಲ್ಲಿ ಹೋರಾಡಲಿ?', 'ರೋಗಿಷ್ಠ ರೂಪಕಗಳೊಡನೆ ಕವಿತೆ ಹೇಗೆ ಹೆಣೆಯಲಿ?' ಎನ್ನುವ ಕವಿಯ ಕೂಗು ಇಂದು ನಮ್ಮೆಲ್ಲರ ಕೂಗೂ ಹೌದು. ಒಂದೆಡೆ ಸಮಾಜದಲ್ಲಿನ ಅಸಮಾನತೆಯ ವಿಷಬೀಜಗಳು, ಇನ್ನೊಂದೆಡೆ ಪ್ರಭುತ್ವದ ಬಿಗಿಮುಷ್ಟಿ, ಮತ್ತೊಂದೆಡೆ ಬಂಡವಾಳಶಾಹಿ ಒಡ್ಡುತ್ತಿರುವ ಕೀರ್ತಿಯ ಉನ್ಮಾದ. ಇವೆಲ್ಲವೂ ಇಂದು ಬರೆಯುತ್ತಿರುವವರಿಗೆ ಸವಾಲುಗಳಾಗಿವೆ. ಇವು ವಿಶಾಲ ಭಿತ್ತಿಯಲ್ಲಿ ಅಭಿವ್ಯಕ್ತಿಗೆ ಸ್ಪೇಸ್ ಕಲ್ಪಿಸುತ್ತಿರುವಂತೆ ಕಂಡರೂ ಪರೋಕ್ಷವಾಗಿ ಎಲ್ಲಕ್ಕೂ ಜಾಗ ಕೊಡುತ್ತ, ಎಲ್ಲವನ್ನೂ ಗೌಣಗೊಳಿಸುತ್ತಿರುವುದೂ ಹೌದು. ಹೀಗಾಗಿ ಇಂದು ಬರೆಯುತ್ತಿರುವವರ ಮುಂದೆ ಅವಕಾಶಗಳ ಹೆದ್ದಾರಿಯೇ ತೆರೆದಂತೆ ಕಂಡರೂ ಈ ಅವಕಾಶಗಳೇ ನೇರವಾಗಿ ಮತ್ತು ಪರೋಕ್ಷವಾಗಿ, ನಮ್ಮ ಅಭಿವ್ಯಕ್ತಿಯನ್ನು ನಿಯಂತ್ರಿಸುತ್ತಿವೆ ಮತ್ತು ನಿರ್ದೇಶಿಸುತ್ತಿವೆ. ಇವುಗಳ ನಡುವೆಯೇ ಬರಹಗಾರರಿಗೆ ದೊರೆಯುತ್ತಿರುವ ಮನ್ನಣೆಗಳನ್ನು ಮೆಚ್ಚುತ್ತಲೇ ಅವುಗಳ ಬಗ್ಗೆ ಒಂದು ಗುಮಾನಿಯೂ ಇರಬೇಕೆನಿಸುತ್ತದೆ.

ಕವಿ ಹೇಳುವಂತೆ 'ದೃಷ್ಟಿಹೀನ ಜಗತ್ತಿನಲ್ಲಿ ಕಣ್ಣಿಗೆ ಬೆಲೆ ಕಡಿಮೆ' ಎನಿಸಿದರೂ ಈ ದೃಷ್ಟಿಯೇ ಕುರುಡಿಗೆ ಮದ್ದರೆಯಬಲ್ಲದು. ಹೀಗಾಗಿ ಯಾರು ಕಾಣಬಲ್ಲರೋ ಅವರು, ಎಲ್ಲ ತೊಡರುಗಳ ನಡುವೆಯೂ ಕಂಡದ್ದನ್ನು ಕೂಗಿ ಹೇಳುತ್ತಲೆ ಇರಬೇಕಾಗುತ್ತದೆ. ಕಾವ್ಯದ ಕೆಲಸ ಇದು ಎಂಬ ದೃಢವಾದ ತಿಳಿವಳಿಕೆ ಕವಿಗಿದೆ. ಈ ಎಚ್ಚರದೊಂದಿಗೆ ಮತ್ತು ಪ್ರೀತಿ, ಕಾವ್ಯಪ್ರೀತಿಯ ಬೆಳಕಿನೊಂದಿಗೆ ಕವಿಯ ಲೋಕ ಸಂವಾದ ಮುಂದುವರೆದಿದೆ...

●